ಕತೆ

ಪಿ.ಪಿ. ಉಪಾಧ್ಯ



ಚಿತ್ರಗಳು: ಸೃಜನ್

ಆಸ್ಪತ್ರೆಯ ಜನರಲ್ ವಾರ್ಡಿನ ಮಂಚದ ಮೇಲೆ ಮಲಗಿ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ ಮಗನನ್ನು ಒಂದೇ ಸವನೆ ನೋಡುತ್ತಿದ್ದಾಳೆ ರಾಗಿಣಿ. ರಾತ್ರಿಯೆಲ್ಲ ನಿದ್ದೆ ಬಿಟ್ಟು ಕಾಯುತ್ತಿದ್ದ ಆ ಮಗ ಚೇತರಿಸಿಕೊಳ್ಳುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಬೆಳಿಗ್ಗೆ ಮಾಮೂಲಿಯಂತೆ ಬಂದ ಡ್ಯೂಟಿಯ ಡಾಕ್ಟರು 'ಏನು ನಿರ್ಧಾರ ಮಾಡಿದಿರಿ. ಇನ್ನೊಂದೇ ದಿನ ಬಾಕಿ' ಎಂದು ತಮ್ಮ ಅಂತಿಮ ಎಚ್ಚರಿಕೆ ನೀಡಿದ್ದರು. 'ಅಷ್ಟರೊಳಗೇನಾದರೂ ಮಾಡದಿದ್ದರೆ ಮತ್ತೆ ನಾವು ಏನೂ ಮಾಡಲಿಕ್ಕಾಗದು.' ಬಾಯಿ ಬಿಟ್ಟು ಹೇಳದಿದ್ದರೂ ಅವರ ಮಾತಿನಲ್ಲಿ ಅದೇ ಧ್ವನಿಯಿತ್ತು.

ಆಸ್ಪತ್ರೆ ಚ್ಯಾರಿಟಿ ಆಸ್ಪತ್ರೆಯೇ ಆದರೂ ಮಗನ ಆಪರೇಷನ್ನಿಗೆ ಕನಿಷ್ಠ ಎರಡು ಲಕ್ಷವನ್ನಾದರೂ ಕಟ್ಟಬೇಕೆಂದಿದ್ದಾರೆ. ಅದೇ ಖಾಸಗೀ ಆಸ್ಪತ್ರೆಗಳಲ್ಲಿಯಾದರೆ ಎಂಟರಿಂದ ಹತ್ತು ಲಕ್ಷವಾಗಬಲ್ಲ ಛಾರ್ಜು